**ಸಾಕ್ಷಿಯನ್ನು ಕರೆಸಲಾಯಿತು** **ಪ್ರಮಾಣ ವಚನ ಮಾಡಿಸಲಾಯಿತು**

**ದಿಃ08-04-2026**

**ಪಾಟೀ ಸವಾಲುಃ ವಾದಿ ಪರ ಶ್ರೀ ಎಸ್ ವಿ ಎಸ್ ವಕೀಲರಿಂದ**

1 ನೇ ಪ್ರತಿವಾದಿ ಮನೆಯಲ್ಲಿ ಇರುತ್ತಾರೆ. 1 ನೇ ಪ್ರತಿವಾದಿಗೆ ವಾದಿಗೆ ಹಿಸ್ಸಾ ಹಕ್ಕು ನೀಡಲು ಇಚ್ಚೆ ಇರುತ್ತದೆ ಎಂದರೆ ಸರಿಯಲ್ಲ. ಆದ್ದರಿಂದ ನಾನು ಅವರನ್ನು ನ್ಯಾಯಾಲಯಕ್ಕೆ ಕರೆಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ದಿಃ 28.11.1990 ರಲ್ಲಿ ಜನಿಸಿರುತ್ತೇನೆ. ನಿ ಡಿ 6 ನಾನು ಹುಟ್ಟುವ ಮೊದಲೇ ಆಗಿರುವ ಬಗ್ಗೆ ನಮೂದಿದೆ ಎಂದರೆ ಸರಿ. ನಿ ಡಿ 6 ನ್ನು ನನ್ನ ಅಜ್ಜಿ ಬರೆಸಿರುತ್ತಾರೆ. ಆದರೆ ಯಾರು ಬರೆದಿರುತ್ತಾರೆಂದು ಗೊತ್ತಿಲ್ಲ. ವಿಲ್ ನ್ನು ನ್ಯಾಯಾಲಯದಲ್ಲಿ ಪ್ರೊಬೇಟ್ ಮಾಡಿಸಬೇಕೆಂದರೆ ಸರಿ. ನಿ ಡಿ 6 ನ್ನು ಪ್ರೊಬೇಟ್ ಮಾಡಿಸಿರುವುದಿಲ್ಲ. ಈ ದಾವೆಗಾಗಿ ನಿ ಡಿ 6 ನ್ನು ಸೃಷ್ಠಿ ಮಾಡಿರುತ್ತೇನೆಂದರೆ ಸರಿಯಲ್ಲ. ನಿ ಡಿ 6 ಕಾನೂನು ಮಾನ್ಯತೆ ಇರುವ ದಾಖಲಾತಿ ಎಂದರೆ ಗೊತ್ತಿಲ್ಲ.

ನಿ ಡಿ 1 ರಿಂದ 3 ದಾಖಲಾತಿಗಳಲ್ಲಿ ಯಾವ ದಿನಾಂಕ ಮತ್ತು ಯಾವ ವರ್ಷದ ದಾಖಲಾತಿಗಳು ಎಂದು ನಮೂದಿಲ್ಲ ಎಂದರೆ ಸರಿ. ದಾವ ಆಸ್ತಿಗೂ ನಿ ಡಿ 6 ವಿಲ್ ಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಿ ಡಿ 6 ರ ದಾಖಲಾತಿ ಮೇಲೆ ಯಾವುದೇ ಹಕ್ಕು ಪ್ರಾಪ್ತವಾಗುವುದಿಲ್ಲ ಎಂದರೆ ಸರಿಯಲ್ಲ. ನಿ ಡಿ 6 ನ್ನು ನನ್ನ ಪಾಟೀ ಸವಾಲಿನ ಮೊದಲೇ ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇರಲಿಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

ಸಹಿ/-

ಸಿ/ಸಿ **1ನೇ ಹೆಚ್ಚುವರಿ ಸಿವಿಲ್**

**ನ್ಯಾಯಾಧೀಶರು**

**ಮತ್ತು ಜೆ.ಎಂ.ಎಫ್.ಸಿ ಸಕಲೇಶಪುರ**